## ಅಧ್ಯಾಯ–೭
# ಸಾರಿಗೆ ಮತ್ತು ಸಂಪರ್ಕ

ಮಾನವ ತನ್ನ ದೈನಂದಿನ ಆಹಾರ ವಿಹಾರಗಳಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಿದ್ದುದು ಸರಿಯಷ್ಟೆ. ಹೀಗೆ ವಲಸೆ ಹೋಗುತ್ತಿದ್ದ ಒಂದೇ ಗುಂಪು ಕ್ರಮೇಣ ಹಲವಾರು ಗುಂಪುಗಳಾಗಿ, ವಿವಿಧೆಡೆ ನೆಲೆಸಲಾರಂಭಿಸಿತು. ತತ್ಪರಿಣಾಮವಾಗಿ ಒಂದು ಗುಂಪಿನವರಿದ್ದ ಸ್ಥಳಕ್ಕೆ ಮತ್ತೊಂದು ಗುಂಪಿನವರು ಹೋಗಿ ಬರಬೇಕಾದ ಅನಿವಾರ್ಯತೆಯುಂಟಾದಾಗ ಕಾಲುನಡಿಗೆಯೊಂದೇ ಮೊದಲ ಕ್ರಮವಾಗಿದ್ದು ತರುವಾಯದಲ್ಲಿ ಪ್ರಾಣಿಗಳನ್ನು ಪಳಗಿಸಿ ಅವುಗಳ ಮೇಲೆ ಸಂಚರಿಸಿದ. ಕೆಲಮೊಮ್ಮೆ ಶಕ್ತರ ಕೈತಾಕಿನಲ್ಲಿ ಕುಳಿತು ಸಂಚರಿಸುವ ಕ್ರಮವೂ ಡೋಲಿಯಲ್ಲಿ ಹೊತ್ತೊಯ್ಯುವ ಪದ್ಧತಿಯೂ ಚಾಲ್ತಿಗೆ ಬಂತು. ಹೀಗಾಗಿ ಮಾನವ ತಾನು ಸಂಚರಿಸುವ ಪ್ರದೇಶಗಳಲ್ಲಿ ಹೆಜ್ಜೆಯೂರಿದೆಡೆ ಕಾಲುದಾರಿಗಳಾದವು. ಪ್ರಾಣಿಗಳು ಹೇರನ್ನು ಹೊತ್ತು ಸಾಗುವ ಹೇರೆತ್ತಿನ ದಾರಿ, ಕತ್ತೆ ದಾರಿಗಳು ರೂಪು ತಾಳಿ, ಕ್ರಮೇಣ ಪ್ರಾಣಿಗಳಿಂದ ಎಳೆಯುವ ಬಂಡಿಗಳು ಚಾಲ್ತಿಗೆ ಬಂದವು. ಆಗ ದಾರಿ ವಿಸ್ತಾರವಾಯಿತು. ಬಗೆಬಗೆಯ ವಾಹನಗಳ ಚಲನೆಯಿಂದಾಗಿ ಹೆದ್ದಾರಿಗಳು ಮೈತಾಳಿದವು. ಬ್ರಿಟಿಷ್ ಕಮಿಷನರ್ ಆಡಳಿತಾವಧಿಯಲ್ಲಿ (೧೮೭೧–೮೧) ಸಾರಿಗೆ ಸಂಪರ್ಕ ಗಣನೀಯವಾಗಿ ಸುಧಾರಿಸಿತು.

ಈಗ ತಾಲೂಕಿನಾದ್ಯಂತ ರಸ್ತೆಸಾರಿಗೆ ಸೌಲಭ್ಯವಿದೆ. ಪ್ರಾರಂಭದಲ್ಲಿ ಮಣ್ಣಿನ ಹಾದಿಗಳಿದ್ದು, ಅವೇ ಮುಂದೆ ಜಲ್ಲಿಕಲ್ಲುಗಳನ್ನು ಸಮತಟ್ಟಾಗಿ ಸುರಿದು ದಮ್ಮಸು ಮಾಡಿದ ರಸ್ತೆಗಳಾದವು. ಈಗ ಟಾರನ್ನು ಬಳಸಿ ನಿರ್ಮಿಸಿದ ರಸ್ತೆಗಳು ತಾಲೂಕಿನ ಎಲ್ಲ ಕಡೆಗಳಲ್ಲೂ ಇವೆ. ಪಿರಿಯಾಪಟ್ಟಣದಿಂದ ಬೆಟ್ಟದಪುರದ ಮೂಲಕ ಹಾಸನಕ್ಕೆ ಹೋಗಲು ಅರಕಲಗೂಡು ಮಾರ್ಗವಿದೆ. ದಕ್ಷಿಣಕ್ಕೆ ಆನೆಚೌಕೂರು ಮೂಲಕ ವೀರಾಜಪೇಟೆಗೆ ಹೋಗುವ ರಸ್ತೆಯಿದೆ. ಮೈಸೂರು–ಮಡಿಕೇರಿ ಹೆದ್ದಾರಿಯಲ್ಲಿರುವ ಕಂಪಲಾಪುರದಿಂದ ರಾವಂದೂರಿಗೆ ಹೋಗುವ ರಸ್ತೆಯಿದೆ. ರಾವಂದೂರಿನಿಂದ ಬೆಟ್ಟದಪುರ ಮತ್ತು ಕಿತ್ತೂರಿಗೆ ಹೋಗುವ ರಸ್ತೆಗಳಿವೆ. ರಾವಂದೂರಿನಿಂದ ಕೊಲ್ಲೂರು ಮೂಲಕ ಕೆ.ಆರ್.ನಗರ ತಲುಪುವ ರಸ್ತೆ ಇದೆ. ಕಿತ್ತೂರಿನಿಂದ ಚುಂಚನಕಟ್ಟೆ ಮೂಲಕ ಕೆ.ಆರ್.ನಗರ ಸಾಲಿಗ್ರಾಮಗಳಿಗೆ ಹೋಗುವ ರಸ್ತೆಯಿದೆ. ಚುಂಚನಕಟ್ಟೆಯಿಂದ ತಾಲೂಕನ್ನು

ಪ್ರವೇಶಿಸುವ ಮಾರ್ಗದಲ್ಲಿ ಕಿತ್ತೂರಿಗೆ, ಬೆಟ್ಟದಪುರದ ಮೂಲಕ ಕುಶಾಲನಗರಕ್ಕೆ ಹೋಗುವ ರಸ್ತೆಯಿದೆ. ಅತ್ತಿಗೋಡು–ಹನಸೋಗೆ ರಸ್ತೆ, ಅತ್ತಿಗೋಡು–ಹೊಸಕೋಟೆರಸ್ತೆ, ಅತ್ತಿಗೋಡು–ಆಯಿತನಹಳ್ಳಿ–ಸೀಗೂರು ರಸ್ತೆ, ಸೀಗೂರು–ಕೋಮಲಾಪುರ ರಸ್ತೆ, ಚಿಟ್ಟೇನಹಳ್ಳಿ–ಬೆಕ್ಕರೆ, ಬೂವನಹಳ್ಳಿ ರಸ್ತೆ, ಕಂದೇಗಾಲ–ಚಿಕ್ಕನೇರಳೆರಸ್ತೆ, ಹೊಸೂರು–ಚಪ್ಪರದಹಳ್ಳಿ ರಸ್ತೆ, ಚಪ್ಪರದಹಳ್ಳಿ–ಕಂಬೀಪುರ–ಸೂಳೇಕೋಟೆ ರಸ್ತೆ, ಬೆಟ್ಟದಪುರ–ಚಿಕ್ಕನೇರಳೆ–ಹಾರ್ನಳ್ಳಿರಸ್ತೆ, ಗೊರಳ್ಳಿ–ಚಪ್ಪರದಹಳ್ಳಿ–ಹಾರ್ನಳ್ಳಿ–ಅಂಬಾರೆ–ದೊಡ್ಡಕಮರವಳ್ಳಿ ರಸ್ತೆ, ಕುಂದನಹಳ್ಳಿಸರ್ಕಲ್–ನಂದಿನಾಥಪುರ ರಸ್ತೆ, ಪಿರಿಯಾಪಟ್ಟಣ–ಮುತ್ತೂರುರಸ್ತೆ, ಕಣಗಾಲು–ಕಂಬೀಪುರ ರಸ್ತೆ, ಕಣಗಾಲು ಕಟ್ಟೇಪುರ ರಾಮನಾಥಪುರ ಮುಂತಾದ ರಸ್ತೆಗಳು ತಾಲೂಕಿನಲ್ಲಿವೆ.

೧೯೪೩ರ ಕಾನ್ಪುರ ಯೋಜನೆಯ ಪ್ರಕಾರ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಇತರ ಜಿಲ್ಲಾ ರಸ್ತೆ ಹಾಗೂ ಗ್ರಾಮಾಂತರ ರಸ್ತೆಗಳೆಂದು ವರ್ಗೀಕರಿಸಲಾಯಿತು. ೧೯೮೬ರ ಮಾರ್ಚ್ ಅಂತ್ಯಕ್ಕೆ ಈ ತಾಲೂಕಿನಲ್ಲಿ ೪೭ ಕಿ.ಮೀ. ರಾಜ್ಯ ಹೆದ್ದಾರಿ, ೩೯ ಕಿ.ಮೀ. ಜಿಲ್ಲಾ ಮುಖ್ಯರಸ್ತೆ, ೧೬೮ ಕಿ.ಮೀ. ಇತರೆ ಜಿಲ್ಲಾ ರಸ್ತೆ, ೩೦೪ ಕಿ.ಮೀ. ಹಳ್ಳಿರಸ್ತೆ, ಒಂದು ಕಿ.ಮೀ ಅರಣ್ಯ ರಸ್ತೆ, ೨೦೦ ಕಿ.ಮೀ. ತಾ.ಅ.ಮಂ. ರಸ್ತೆ ಹಾಗೂ ೧೦ ಕಿ.ಮೀ. ನೀರಾವರಿ ರಸ್ತೆಗಳಿದ್ದವು. ಪ್ರಸ್ತುತ ತಾಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳಾವುದೂ ಇಲ್ಲ, ಆದರೆ ರಾಜ್ಯ ಹೆದ್ದಾರಿ ೨೧ (ಹಳೇಬೀಡು–ಆನೇಚೂರು) ಹಾಗೂ ೮೮ (ಮೈಸೂರು–ಬಂಟ್ವಾಳ) ತಾಲೂಕಿನಲ್ಲಿ ಕ್ರಮಿಸುತ್ತವೆ. ತಾಲೂಕಿನಲ್ಲಿ ೨೦೦೯ರ ಮಾರ್ಚ್ ಅಂತ್ಯಕ್ಕೆ ಲೋಕೋಪಯೋಗಿ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟ ೭೨.೪೪ ಕಿ.ಮೀ. ರಾಜ್ಯಹೆದ್ದಾರಿ ಹಾಗೂ ೩೫೧.೮೭ ಕಿ.ಮೀ. ಮುಖ್ಯ ಜಿಲ್ಲಾರಸ್ತೆ; ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ನಿಯಂತ್ರಣಕ್ಕೊಳಪಟ್ಟ ೧೫.೨೦ ಕಿ.ಮೀ. ಇತರ ಜಿಲ್ಲಾರಸ್ತೆ, ೬೮೮.೩೨ ಕಿ.ಮೀ. ಹಳ್ಳಿರಸ್ತೆ ಇದ್ದು, ೮.೪೭ ಕಿ.ಮೀ. ಅರಣ್ಯ ಇಲಾಖಾ (ಒಟ್ಟು ೧೦೩೬.೩೦ ಕಿ.ಮೀ.) ರಸ್ತೆಗಳಿದ್ದು, ಇದರಲ್ಲಿ ೩೩೫ ಕಿ.ಮೀ. ಪಕ್ಕಾ ರಸ್ತೆಗಳಿದ್ದವು. ಅಲ್ಲದೆ ಪಂಚಾಯತ್ ಹಾಗೂ ತಾಲೂಕು ಅಭಿವೃದ್ಧಿ ಮಂಡಳಿ ರಸ್ತೆಗಳೂ ತಾಲೂಕಿನಲ್ಲಿವೆ.

೧೯೮೬ರ ವೇಳೆಗೆ ತಾಲೂಕಿನಲ್ಲಿದ್ದ ೯೭ ವಸತಿ ಗ್ರಾಮಗಳಲ್ಲಿ ೧೦೨ ಗ್ರಾಮಗಳಿಗೆ ಸರ್ವಋತು ರಸ್ತೆ, ೭೬ ಗ್ರಾಮಗಳಿಗೆ ಉತ್ತಮ ಋತು ರಸ್ತೆಗಳಿದ್ದು, ೧೯ ಗ್ರಾಮಗಳಿಗೆ ಕಚ್ಚಾರಸ್ತೆಗಳಿದ್ದವು. ಅದೇ ೨೦೦೯ರ ಅಂತ್ಯಕ್ಕೆ ಗ್ರಾಮೀಣ ರಸ್ತೆಗಳನ್ನು ಸರ್ವಋತು ರಸ್ತೆಗಳನ್ನಾಗಿಸುವ ಕ್ರಿಯೆ ಪ್ರಗತಿಯಲ್ಲಿದ್ದು, ಎಲ್ಲಾ ಗ್ರಾಮಗಳಿಗೂ ರಸ್ತೆ ಸೌಕರ್ಯವನ್ನು ಒದಗಿಸಲಾಗಿತ್ತು.

**ಸೇತುವೆಗಳು :** ತಾಲೂಕಿನ ವಾಯವ್ಯ ಭಾಗದಲ್ಲಿ ಕಾವೇರಿ ನದಿಯು ಜಿಲ್ಲಾ ಗಡಿಯಾಗಿ ಹರಿದಿದ್ದರೂ, ಯಾವುದೇ ಸೇತುವೆ ಕಟ್ಟಲ್ಪಟ್ಟಿಲ್ಲ. ಆದರೆ, ಹಳ್ಳಕೊಳ್ಳಗಳಿಗೆ ಕಟ್ಟಿರುವ ಕಿರು ಸೇತುವೆಗಳು ಸಾಕಷ್ಟಿವೆ. ೧೯೮೬ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಆರು ಮೀಟರ್‌ಗಿಂತ ಕಡಿಮೆ ಪ್ರಮಾಣದ ೫೩೩, ೬–೧೨ ಮೀ. ಒಳಗಿನ ೧೦,

೧೨-೧೮ ಮೀ. ಉದ್ದದ ಎರಡು, ೧೮-೨೪ ಮೀಟರ್ ಉದ್ದದ ಒಂದು, ಎಲ್ಲಾ ಸೇರಿ ಒಟ್ಟು ೫೪೬ ಸೇತುವೆಗಳು ಇದ್ದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ಲೋಕೋಪಯೋಗಿ ಇಲಾಖೆಯ ನಿಯಂತ್ರಣಕ್ಕೊಳಪಟ್ಟಿದ್ದ ವಿವಿಧ ಗಾತ್ರದ (ಮೂರು ಮೀಟರಿನಿಂದ ೬೦ ಮೀ.) ೩೯೧ ಸೇತುವೆಗಳು ತಾಲೂಕಿನಲ್ಲಿದ್ದವು.

ಜಿಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಯು ಮೋಟಾರು ವಾಹನಗಳ ನೋಂದಣಿ ಪರವಾನಗಿ ಮುಂತಾದ ಕಾರ್ಯವನ್ನು ನಿರ್ವಹಿಸುತ್ತಿದೆ. ಆ ಪ್ರಕಾರ ಈ ತಾಲೂಕಿನಲ್ಲಿ ೧೯೮೭ರ ಜೂನ್ ಅಂತ್ಯಕ್ಕೆ ವಿವಿಧ ವರ್ಗಕ್ಕೆ ಸೇರಿದ ಒಟ್ಟು ೧೧೮೫ ಮೋಟಾರು ವಾಹನಗಳು ನೋಂದಣಿಗೊಂಡಿದ್ದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿನ ಮೋಟಾರು ವಾಹನಗಳ ವಿವರ: ಮೋಟಾರ್ ಸೈಕಲ್‌ಗಳು ೧೦,೯೪೩, ಜೀಪುಗಳು ೩೭, ಬಾಡಿಗೆ ಕಾರುಗಳು ೯೧, ಆಟೋರಿಕ್ಷಾಗಳು ೨೪೧, ಆಮ್ನಿ ಬಸ್‌ಗಳು ೦೯, ಟ್ರಾಕ್ಟರ್ಸ್ ಮತ್ತು ಟ್ರೈಲರ್ಸ್ ೧೯೪೦, ಆಂಬ್ಯುಲೆನ್ಸ್ ೦೧ ಹಾಗೂ ಸರಕು ಸಾಗಿಸುವ ವಾಹನಗಳು ೭೧೯, ಈ ಪ್ರಕಾರ ಒಟ್ಟು ೧೩,೮೮೧ ವಾಹನಗಳು ತಾಲೂಕಿನಲ್ಲಿ ನೋಂದಣಿಗೊಂಡಿದ್ದು, ಜಿಲ್ಲಾ ಮಟ್ಟದಲ್ಲಿ ಐದನೆ ಸ್ಥಾನದಲ್ಲಿತ್ತು.

**ಜಲಸಾರಿಗೆ :** ತಾಲೂಕಿನ ಪಶ್ಚಿಮದಿಕ್ಕಿನಲ್ಲಿ ಹರಿಯುವ ಕಾವೇರಿ ನದಿಯು ಕುಶಾಲನಗರದಿಂದ ಕಟ್ಟೇಪುರದವರೆಗೂ ಸಾಗಿ ಅಲ್ಲಿಂದ ಪೂರ್ವಾಭಿಮುಖವಾಗಿ ಹರಿಯುತ್ತದೆ. ಹಿಂದೆ ಈ ನದಿಯ ಎರಡೂ ದಡಗಳಲ್ಲಿರುವ ಊರುಗಳಿಗೆ ಹೋಗಿ ಬರಬೇಕಾದ ಜನರು ದೋಣಿಗಳಲ್ಲಿ ಸಂಚರಿಸುತ್ತಿದ್ದರು. ಆದರೆ ಈಚಿನ ದಿನಗಳಲ್ಲಿ ಕೊಪ್ಪ, ಸೂಳೆಕೋಟೆ ಮತ್ತು ಕಣಗಾಲುಗಳಲ್ಲಿ ಸೇತುವೆ ನಿರ್ಮಿಸಿ ಕೊಡಗು ಮತ್ತು ಹಾಸನ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಆದರೆ ಇಂದಿಗೂ ಹೊನ್ನಾಪುರ, ಸೂಳೆಕೋಟೆ ಹಾಗೂ ದೊಡ್ಡಕಮರಹಳ್ಳಿಗಳಲ್ಲಿ ಹೊಳೆದಾಟಲು ದೋಣಿ ಹಾಗೂ ಹರಿಗೋಲುಗಳನ್ನು ಸ್ಥಳೀಯವಾಗಿ ಬಳಸುತ್ತಾರೆ.

**ಸಾರ್ವಜನಿಕ ಸಾರಿಗೆ :** ಇತ್ತೀಚೆಗೆ ಪ್ರಯಾಣಿಕರ ಸಂಖ್ಯೆ ಹಾಗೂ ವಾಹನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿರುವುದರಿಂದ ಈವರೆಗಿದ್ದ ರಸ್ತೆಗಳು ಪ್ರಯಾಣ ಸೌಲಭ್ಯಕ್ಕೆ ತೊಡಕಾಗಿ ಪರಿಣಮಿಸಿವೆ. ಈ ಕಾರಣದಿಂದ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್‌ಗಳು ರಾಜ್ಯ ಹೆದ್ದಾರಿಗಳನ್ನು ಅಗಲೀಕರಣಗೊಳಿಸಲು ಬೃಹತ್ ಯೋಜನೆಗಳನ್ನು ಹಮ್ಮಿಕೊಂಡಿವೆ. ತತ್ಪರಿಣಾಮವಾಗಿ ತಾಲೂಕಿನಲ್ಲಿ ಹಾದುಹೋಗಿರುವ ಎರಡು ಹೆದ್ದಾರಿಗಳ ಅಗಲೀಕರಣ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ.

ಇಂದು ತಾಲೂಕಿಗೆ ರಾಜ್ಯ ರಸ್ತೆ ಸಾರಿಗೆ ಬಸ್ ಸೌಕರ್ಯವಿದೆ. ಆದರೆ ತಾಲೂಕಿಗೆ ಬಸ್ಸುಗಳು ೧೯೧೦-೨೦ರ ಅವಧಿಯಲ್ಲಿ ಮೊದಲ ಬಾರಿಗೆ ಪ್ರವೇಶಿಸಿದವು. ಪಾಲಂಜೆ ಮೋಟಾರ್ಸ್, ಮೈಸೂರು-ಮಡಿಕೇರಿ ನಡುವೆ ಪಿರಿಯಾಪಟ್ಟಣ ಮಾರ್ಗವಾಗಿ ಸಂಚರಿಸಲಾರಂಭಿಸಿತು. ಇಂದು ತಾಲೂಕಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಉತ್ತಮ ಸೌಕರ್ಯ ಲಭ್ಯವಿದೆ. ಆದರೂ ಗ್ರಾಮೀಣ ಭಾಗದಲ್ಲಿ ಬಂಡಿಗಳು

ಚಾಲ್ತಿಯಲ್ಲಿದ್ದು, ೧೯೮೩ರಲ್ಲಿ ತಾಲೂಕಿನಲ್ಲಿ ಒಟ್ಟು ೪,೭೯೭ (೪.೭೮೧ + ೧೬ನ) ಎತ್ತಿನಗಾಡಿಗಳು ಕಾರ್ಯಪ್ರವೃತ್ತವಾಗಿದ್ದವು.

## ರೈಲು ಯೋಜನೆ

ಮೈಸೂರು–ಮಡಕೇರಿ, ತೆಲಚೇರಿ ಮಾರ್ಗ ರಚನೆ ಬಗ್ಗೆ ೧೮೮೧–೮೨ರಷ್ಟು ಹಿಂದೆಯೇ ಚಿಂತಿಸಲಾಗಿತ್ತು. ಮೈಸೂರು–ಮಡಕೇರಿ ಮಾರ್ಗಕ್ಕಾಗಿ ಎರಡು ಹಾದಿ ಸೂಚಿಸಲಾಗಿತ್ತು. ಮೈಸೂರು–ಎಡತೋರೆ–ಬೆಟ್ಟದಪುರ–ಕುಶಾಲನಗರ ಒಂದು ಮಾರ್ಗವಾದರೆ, ಮೈಸೂರು–ಹುಣಸೂರು–ಸಾಗರಕಟ್ಟೆ, ಗೋಣಿಕೊಪ್ಪಲ್ ಇನ್ನೊಂದು ಮಾರ್ಗವಾಗಿತ್ತು. ರಾಜ್ಯದ ಮುಖ್ಯಮಂತ್ರಿಯಾಗಿದ್ದ ದಿವಂಗತ ಗುಂಡೂರಾಯರು ಮೈಸೂರು–ಪಿರಿಯಾಪಟ್ಟಣ–ಕುಶಾಲನಗರ ರೈಲುಮಾರ್ಗ ನಿರ್ಮಾಣ ಯೋಜನೆಯ ಕನಸು ಕಂಡಿದ್ದು ಆ ಉದ್ದೇಶಿತ ಯೋಜನೆಯು ನನಸಾಗಬೇಕಾಗಿದೆ.

**ವಿಮಾನ ನಿಲ್ದಾಣ :** ಪಿರಿಯಾಪಟ್ಟಣಕ್ಕೆ ಮೈಸೂರು ಸಮೀಪದ ವಿಮಾನ ನಿಲ್ದಾಣವಾಗಿದೆ.

## ಅಂಚೆ–ತಂತಿ ಸೇವೆ

ರಾಜಮಹಾರಾಜರ ಕಾಲದಲ್ಲಿ ದೂತರು ಅಥವಾ ರಾಯಭಾರಿಗಳು ಕಾಲ್ನಡಿಗೆಯಲ್ಲಿ, ಬಂಡಿ ಅಥವಾ ಕುದುರೆಗಳ ಮೇಲೆ ಹೋಗಿ ಸುದ್ದಿಯನ್ನು ತಲುಪಿಸುವ ಮಾಧ್ಯಮಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರೇ ಒಂದು ರೀತಿಯಲ್ಲಿ ಸಮಾಚಾರ ತಲುಪಿಸುವ ಹಂಸದೂತ ಕಾರ್ಯವನ್ನು ಮಾಡುತ್ತಿದ್ದರು. ಪತ್ರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯುವ ಇವರನ್ನು ವಾಲೆಬಂಟಣ್ಣ ಎಂದು ಕರೆಯುತ್ತಿದ್ದರು. ಆದರೂ ಹಂಸದೂತ ಪುರಾಣ ಪ್ರಸಂಗದಿಂದ ಹಂಸ – ಅಂಚೆಯಾಗಿ ಅಂಚೆಯಣ್ಣ ಶಬ್ದ ರೂಢಿಗೆ ಬಂತು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅಂಚೆ ವ್ಯವಸ್ಥೆಯು ಸಂಸ್ಥಾನದಲ್ಲೂ ಆರಂಭವಾಯಿತು. ೧೮೪೪ರ ವೇಳೆಗೆ ಮದ್ರಾಸ್, ಮೈಸೂರು, ಹುಣಸೂರು ನಡುವೆ ಡಾಕ್ ಅಂಚೆ ಸೇವೆ ಲಭ್ಯವಿತ್ತು. ಅಲ್ಲದೆ ೧೮೩೭ರ ವೇಳೆಗೆ ಮದ್ರಾಸ್–ಮಂಗಳೂರು ನಡುವೆ, ಬೆಂಗಳೂರು–ಮೈಸೂರು–ಹುಣಸೂರು ಮಾರ್ಗವಾಗಿ ಬ್ರಿಟೀಷ್ ಇಂಪಿರಿಯಲ್ ಅಂಚೆ ಮಾರ್ಗವು ಚಾಲ್ತಿಯಲ್ಲಿತ್ತು. ಆದರೆ ೧೮೬೩–೬೪ರಲ್ಲಿ ಹುಣಸೂರಿನಲ್ಲಿದ್ದ ಇಂಪೀರಿಯಲ್ ಅಂಚೆ ಕಛೇರಿಯನ್ನು ಮೈಸೂರು ಅಂಚೆ ಸೇವೆ ವ್ಯಾಪ್ತಿಗೆ ಸೇರಿಸಲಾಯಿತು. ಮುಂದೆ ೧೮೮೯ರಲ್ಲಿ ಮೈಸೂರು ಅಂಚೆಯು ಇಂಪೀರಿಯಲ್ ಅಂಚೆಯಲ್ಲಿ ವಿಲೀನವಾಯಿತು. ೧೯೧೭ರ ವೇಳೆಗೆ ಹುಣಸೂರು ತಾಲೂಕಿನಲ್ಲಿ ಏಳು ಅಂಚೆ ಕಚೇರಿಗಳಿದ್ದವು. ೧೯೨೬ರ ವೇಳೆಗೆ ತಾಲೂಕಿನ ಪಿರಿಯಾಪಟ್ಟಣ, ಬೆಟ್ಟದಪುರ, ಕಂಪಲಾಪುರ, ಕಣಗಾಲ್, ರಾವಂದೂರುಗಳಲ್ಲಿ ಅಂಚೆ ಕಚೇರಿಗಳಿದ್ದವು. ಅದೇ ೧೯೮೭ರ ವೇಳೆಗೆ ತಾಲೂಕಿನಲ್ಲಿ ಒಟ್ಟು ೪೦ ಅಂಚೆ ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದವು. ಇಂಗ್ಲೀಷರ ಕಾಲದಲ್ಲಿ ವ್ಯವಸ್ಥಿತವಾದ ಟಪಾಲು ಕಛೇರಿಗಳು ಸೃಷ್ಟಿಯಾಗಿ ಅಂಚೆ ಕಛೇರಿಗಳೆನಿಸಿದವು. ಇವು ಪತ್ರಗಳ ವ್ಯವಹಾರಕ್ಕೆ

ಮಾತ್ರ ಸೀಮಿತವಾಗಿರದೆ ದೂರವಾಣಿ ಸಂಪರ್ಕವನ್ನು ಕಲ್ಪಿಸಿದವು. ಹಣಕಳಿಸಿಕೊಡುವ ಮನಿಆರ್ಡರ್ ವ್ಯವಸ್ಥೆಯೂ ಬಂದಿದ್ದು ಶೀಘ್ರ ವಿಲೇವಾರಿಯ ನಂತರದಲ್ಲಿ 'ಸ್ಪೀಡ್ ಪೋಸ್ಟ್', 'ಕೊರಿಯರ್ ವ್ಯವಸ್ಥೆ'ಗಳು ರೂಪುಗೊಂಡಿವೆ. ತಾಲೂಕಿನಲ್ಲಿ ೨೦೦೯ರ ಮಾರ್ಚ್ ಅಂತ್ಯಕ್ಕೆ ೪೨ ಅಂಚೆಕಚೇರಿಗಳಿದ್ದವು.

'ಇಎಂಎಸ್ ಸ್ಪೀಡ್ ಪೋಸ್ಟ್' ಸೇವೆಯನ್ನು ಇತ್ತೀಚೆಗೆ ಅಂಚೆ ಇಲಾಖೆಯು ತನಗೆ ಪ್ರತಿಸ್ಪರ್ಧಿಯಾಗುತ್ತಿರುವ ಖಾಸಗಿ ವಲಯದ ಕೊರಿಯರ್ ಸೇವೆಗೆ ಸಂವಾದಿಯಾಗಿ ಚಾಲನೆಗೆ ತಂದಿದೆ. ರಜಾ ದಿನಗಳಲ್ಲೂ ಬುಕಿಂಗ್ ಸೌಲಭ್ಯ ಲಭ್ಯವಿದೆ. 'ಪಾಸ್‌ಪೋರ್ಟ್' ಅರ್ಜಿಯನ್ನು ನಿಗದಿತ ಶುಲ್ಕ ಪಾವತಿಸಿ ಈಗ ಅಂಚೆ ಕಛೇರಿಯಿಂದ ಕಳುಹಿಸಿಕೊಡಬಹುದು. ಅಲ್ಲದೆ ಅಂಚೆಪೇದೆಗಳು ಅಂಚೆ ಪತ್ರ ವಿತರಣೆಯ ಜೊತೆಗೆ ಅಂಚೆ ಚೀಟಿ, ಅಂಚೆ ಪತ್ರ ಮತ್ತಿತರ ಅಂಚೆ ಸಾಮಾಗ್ರಿಗಳನ್ನೂ ಅವಶ್ಯವಿದ್ದವರಿಗೆ ಸ್ಥಳದಲ್ಲೆ ಮಾರುವ ಮತ್ತು ಅಂಚೆಯನ್ನು ಸ್ವೀಕರಿಸುವ 'ಪಿಕ್ ಅಪ್ ಸರ್ವೀಸ್' ಈಗಾಗಲೇ ಚಾಲ್ತಿಗೆ ಬಂದಿದೆ. 'ವೆಸ್ಟ್ರನ್ ಯೂನಿಯನ್ ಮನಿ ಟ್ರಾನ್ಸ್‌ಫರ್' ಸೇವೆಯಿಂದಾಗಿ ವಿದೇಶದಿಂದ ಕಳುಹಿಸಿದ ಹಣವನ್ನು ಕೆಲವೇ ನಿಮಿಷಗಳಲ್ಲಿ ಪಡೆಯುವುದು ಸಾಧ್ಯವಾಗಿದೆ. ಕ್ಯಾಷ್ ಸರ್ಟಿಫಿಕೇಟ್, ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್, ಕಿಸಾನ್ ವಿಕಾಸ್ ಪತ್ರ, ಆರ್.ಡಿ ಮುಂತಾದ ಯೋಜನೆಗಳ ಮೂಲಕ ಸಣ್ಣ ಉಳಿತಾಯಕ್ಕೆ ಪ್ರೋತ್ಸಾಹವನ್ನೂ ನೀಡುತ್ತಿದೆ. ಕೊರಿಯರ್ ಸರ್ವೀಸ್‌ಗಳು ಈಗಿನ ಅಂಚೆ ಕಛೇರಿಗಳಿಗೆ ಸ್ಪರ್ಧೆ ನೀಡುತ್ತಿರುವುದು ನಿಜವಾದರೂ, ೧೫೦ ವರ್ಷಗಳ ಪ್ರಾಮಾಣಿಕ ಸೇವೆಯಿಂದ ಗಟ್ಟಿ ನಂಬಿಕೆ ಬೆಳೆಸಿಕೊಂಡಿರುವ 'ಅಂಚೆ'ಗೆ ಈ ಸ್ಪರ್ಧೆಯನ್ನು ಮೀರಿ ಬೆಳೆಯುವ ಚೈತನ್ಯ ಇದೆ.

**ದೂರವಾಣಿ :** ಜಿಲ್ಲೆಯ ಮೊದಲ ಟೆಲಿಫೋನು ಸಂಪರ್ಕವನ್ನು ಕಾಕನಕೋಟೆ-ಹುಣಸೂರು ನಡುವೆ ೧೮೮೯ರ ಖೆಡ್ಡ ಸಂದರ್ಭದಷ್ಟು ಹಿಂದಕ್ಕೆ ಗುರುತಿಸಬಹುದಾದರೂ ಶಾಶ್ವತ ಸಂಪರ್ಕ ಮೈಸೂರಿಗೆ ದೊರೆತದ್ದು ೧೯೦೯ರಲ್ಲಿ. ಮುಂದೆ ೧೯೧೨ರಲ್ಲಿ ಅದನ್ನು ಬೆಂಗಳೂರಿಗೂ ವಿಸ್ತರಿಸಲಾಯಿತು. ಬಹು ಕಾಲ ಇದು ಸರ್ಕಾರಿ ಕಚೇರಿಗಳಿಗೆ, ಸಾರ್ವಜನಿಕ ಸ್ಥಳಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ದೂರವಾಣಿ ಸೇವೆಯು ತಾಲೂಕನ್ನು ಪ್ರವೇಶಿಸಿದ್ದು ೧೯೭೦ರ ದಶಕದಲ್ಲಿ. ೨೦೦೯ರ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೧೨ ದೂರವಾಣಿ ವಿನಿಮಯ ಕೇಂದ್ರಗಳು ೩೫೦೫ ಗ್ರಾಹಕರಿಗೆ ದೂರವಾಣಿ ಸಂಪರ್ಕವನ್ನು ಕಲ್ಪಿಸಿದ್ದವು. ಏತನ್ಮಧ್ಯೆ ಇತ್ತೀಚಿನ ವರ್ಷಗಳಲ್ಲಿ ಮಾಹಿತಿ ತಂತ್ರಜ್ಞಾನ ರಂಗದಲ್ಲುಂಟಾಗಿರುವ ಕ್ರಾಂತಿಕಾರಿ ಬೆಳವಣಿಗೆಗಳಿಂದಾಗಿ, ದೂರವಾಣಿ ಇಲಾಖೆಗೆ ಏರ್‌ಟೆಲ್, ಹಚ್, ಟಾಟಾಇಂಡಿಕಾಂ ಮುಂತಾದ ಖಾಸಗಿ ಕಂಪೆನಿಗಳು ಸ್ಪರ್ಧೆ ನೀಡುತ್ತಿವೆ. ತಳವಾಣಿ (ಲ್ಯಾಂಡ್‌ಲೈನ್)ಗಳು ಇಳಿಮುಖವಾಗುತ್ತಿದ್ದು, ಮೊಬೈಲ್‌ಗಳು ಜನಸಾಮಾನ್ಯರನ್ನು ಆಕರ್ಷಿಸುತ್ತಿವೆ. ತತ್ಪರಿಣಾಮವಾಗಿ ಸ್ಥಿರ ದೂರವಾಣಗಳ ಸಂಖ್ಯೆ ಗಣನೀಯವಾಗಿ ಇಳಿದಿದ್ದರೂ ಸಾರ್ವಜನಿಕ ಕಾಯಿನ್‌ಬೂತ್‌ಗಳು ಗ್ರಾಮೀಣ ಭಾಗವನ್ನೂ ಪ್ರವೇಶಿಸುವ ಮೂಲಕ ಸಂಪರ್ಕವನ್ನು ಸರಳಗೊಳಿಸಿವೆ.

ತಾಲೂಕಿನಲ್ಲಿ ಎರಡು ಶಾಶ್ವತ ಚಿತ್ರಮಂದಿರಗಳು ಹಾಗೂ ಆರು ತಾತ್ಕಾಲಿಕ ಚಿತ್ರಮಂದಿರಗಳಿವೆ.

**ಆಕಾಶವಾಣಿ :** ಮೈಸೂರಿನಲ್ಲಿ ಪ್ರೊ. ಎಂ.ವಿ. ಗೋಪಾಲಸ್ವಾಮಿಯವರು ೧೯೩೫ರಲ್ಲಿ ಆರಂಭಿಸಿದ ಖಾಸಗಿ ಪ್ರಸರಣ ಕೇಂದ್ರವೇ ಮೊದಲ ಕೇಂದ್ರವಾಗಿದ್ದು, ಆಕಾಶವಾಣಿ ಎಂದು ಅದನ್ನು ಕರೆಯಲಾಯಿತು. ಇದು ೧೯೪೧ರಲ್ಲಿ ಸರ್ಕಾರದ ಸ್ವಾದೀನಕ್ಕೊಳಪಟ್ಟಿತು. ಮುಂದೆ ೧೯೫೦ರಲ್ಲಿ ಇದನ್ನು ಆಲ್ ಇಂಡಿಯಾ ರೇಡಿಯೊ ವಹಿಸಿಕೊಂಡು ೧೯೫೫ರವರೆಗೆ ನಿರ್ವಹಿಸಿತಾದರೂ ನವೆಂಬರ್ ೧೯೫೫ರಲ್ಲಿ ಆಕಾಶವಾಣಿ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಆದರೆ ೧೯೭೪ರಲ್ಲಿ ಈ ಕೇಂದ್ರವನ್ನು ಒಂದು ಕಿ.ವ್ಯಾ ಸಾಮರ್ಥ್ಯದ ಟ್ರಾನ್‌ಮೀಟರ್‌ನೊಂದಿಗೆ ಮೈಸೂರಿನಲ್ಲಿ ಪುನರಾರಂಭಿಸಲಾಯಿತು. ಇದರೊಂದಿಗೆ ಜಿಲ್ಲೆಯ ಪ್ರತಿಭೆಗಳಿಗೆ ಅವಕಾಶ ದೊರೆಯುವಂತಾಯಿತು. ಬಹುಹಿಂದಿನಿಂದಲೂ ರೇಡಿಯೋ ಮಾಲಿಕರು ರೇಡಿಯೋ ಲೈಸೆನ್ಸ್ ಪಡೆದು ಪ್ರತಿ ವರ್ಷ ನವೀಕರಿಸುವ ಪದ್ಧತಿ ೧೯೪೦ರಿಂದಲೂ ಚಾಲ್ತಿ ಇತ್ತು. ಆರಂಭದಿಂದಲೂ ಪಿರಿಯಾಪಟ್ಟಣ ತಾಲೂಕಿಗೆ ಮೈಸೂರು ಆಕಾಶವಾಣಿ ಕೇಂದ್ರದ ಕಾರ್ಯಕ್ರಮಗಳು ರೇಡಿಯೋ ಮೂಲಕ ಪ್ರಸಾರವಾಗುತ್ತಿದವು. ಆದರೆ ೧೯೮೪ರಿಂದೀಚೆಗೆ ರೆಡಿಯೋ ಲೈಸೆನ್ಸ್ ಪದ್ಧತಿ ರದ್ದಾಯಿತು. ಆದರಿಂದು ಎಫ್.ಎಮ್. ರೇಡಿಯೋಗಳು ಸಾಕಷ್ಟು ಜನಾದರಕ್ಕೆ ಪಾತ್ರವಾಗಿದ್ದರೂ, ದೂರದರ್ಶನದಂತಹ ದೃಶ್ಯ ಶ್ರವಣ ಮಾಧ್ಯಮದಿಂದಾಗಿ ರೇಡಿಯೋಗಳು ತಮ್ಮ ಅಸ್ತಿತ್ವಕ್ಕಾಗಿ ತಿಣಕಾಡುತ್ತಿವೆ. ಮೈಸೂರು ಆಕಾಶವಾಣಿ ಕೇಂದ್ರವೂ ಸೇರಿದಂತೆ ವಿವಿಧ ಆಕಾಶವಾಣಿ ಕೇಂದ್ರಗಳ ಜೊತೆ ಎಫ್.ಎಂ. ಸೌಲಭ್ಯವೂ ತಾಲೂಕಿಗೆ ದೊರೆಯುತ್ತಿದೆ.

**ದೂರದರ್ಶನ :** ಭಾರತದಲ್ಲಿ ದೂರದರ್ಶನವು ೧೯೫೯ರಷ್ಟು ಹಿಂದೆಯೇ ಬಳಕೆಗೆ ಬಂದರೂ ಕರ್ನಾಟಕವನ್ನು ಅದು ಪ್ರವೇಶಿಸಿದ್ದು, (ಗುಲ್ಬರ್ಗಾ) ೧೯೭೭ರಲ್ಲಿ. ಬೆಂಗಳೂರು ದೂರದರ್ಶನ ಕೆಂದ್ರವು ೧೯೮೧ರಲ್ಲಿ ಆರಂಭಗೊಂಡಿತಾದರೂ ೧೯೮೩ರಿಂದ ಸ್ವತಂತ್ರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾರಂಭಿಸಿತು. ಮುಂದೆ ೧೯೮೪ರಲ್ಲಿ ವಿವಿಧ ಕೇಂದ್ರಗಳಲ್ಲಿ ಪ್ರಸರಣ ಟ್ರಾನ್ಸ್‌ಮೀಟರ್‌ಗಳನ್ನು ಸ್ಥಾಪಿಸಿದಾಗ ಮೈಸೂರಿನಲ್ಲೂ ಸ್ಥಾಪಿಸಲಾಯಿತು. ಇದರೊಂದಿಗೆ ದೂರದರ್ಶನ ಸೌಲಭ್ಯ ತಾಲೂಕಿಗೂ ಲಭಿಸುವಂತಾಯಿತು. ತತ್ಪರಿಣಾಮವಾಗಿ ತಾಲೂಕಿನಾದ್ಯಂತ ದೂರದರ್ಶನ ಬಳಕೆ ಸರ್ವಸಾಮಾನ್ಯವಾಗಿದ್ದು, ಅಲ್ಲಲ್ಲಿ ಸ್ಥಳೀಯವಾಗಿ ಕೇಬಲ್ ಆಪರೇಟರ್‌ಗಳು ಕೇಬಲ್ ಜಾಲದ ಮೂಲಕ ವಿವಿಧ ಚಾನಲ್‌ಗಳನ್ನು ಪರಿಣಾಮಕಾರಿಯಾಗಿ ವೀಕ್ಷಕರಿಗೆ ನೀಡಲು ಯಶಸ್ವಿಯಾಗಿದ್ದು, ಕೇಬಲ್ ಆಪರೇಟರ್‌ಗಳ ಸಂಘಟಿತ ಪ್ರಸರಣ ವ್ಯವಸ್ಥೆಯನ್ನು ಪಿರಿಯಾಪಟ್ಟಣದಲ್ಲೂ ನೋಡಬಹುದಾಗಿದೆ. ಒಂದು ಅಂದಾಜಿನ ಪ್ರಕಾರ ತಾಲೂಕಿನ ಶೇ. ೮೦ ನಗರವಾಸಿಗಳು ಶೇ. ೬೦ ಗ್ರಾಮೀಣರು ದೂರದರ್ಶನ ವೀಕ್ಷಿಸುತ್ತಾರೆಂದು ತಿಳಿದುಬಂದಿದೆ. ಇತ್ತೀಚಿನ ವರ್ಷಗಳಲ್ಲಿ ದೂರದರ್ಶನ ಹಾಗೂ ಖಾಸಗಿಯವರು ಒದಗಿಸುತ್ತಿರುವ ಡೈರೆಕ್ಟ್ ಟು ಹೋಮ್ (DTH) ಸೇವೆಯು ಜನಮನ್ನಣೆಗೆ

ಪಾತ್ರವಾಗುತ್ತಿದೆ. ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಅಂತರಜಾಲ ಸೌಕರ್ಯವು ಜನಸಾಮಾನ್ಯರಿಗೆ ತಲುಪುವಂತಾಗಿದೆ. ಹೋಬಳಿ ಕೇಂದ್ರದಲ್ಲಿ ರೈತ ಸಂಪರ್ಕ ಕೇಂದ್ರಗಳು ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೆ ಅಂತರಜಾಲ ಸೇವೆ ಸುಲಭವಾಗಿ ದೊರೆಯುವಂತಾಗಬೇಕೆಂಬುದು ಸರ್ಕಾರದ ಆಶಯವಾಗಿದೆ.

**ಕಂಪ್ಯೂಟರೀಕರಣ :** ತಾಲೂಕಿನ ಎಲ್ಲಾ ಕಛೇರಿಗಳಲ್ಲೂ ಗಣಕ ಯಂತ್ರವನ್ನು ಬಳಸಲಾಗುತ್ತಿದ್ದು ವ್ಯವಹಾರ ಸುಗಮವಾಗಿ ಸಾಗುತ್ತಿದೆ. ಈ ಕ್ರಮವನ್ನು ಮೊದಲಬಾರಿಗೆ ತಾಲೂಕಿನ ಕಗ್ಗುಂಡಿಯಲ್ಲಿರುವ ತಂಬಾಕು ಮಂಡಳಿಯಲ್ಲಿ ಬಳಸಲಾಯಿತು. ಈಗ ಬ್ಯಾಂಕುಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ, ಸಹಕಾರ ಸಂಘಗಳಲ್ಲಿ ಗಣಕ ಯಂತ್ರಗಳು ಬಳಕೆಯಾಗುತ್ತಿವೆ.

* * * *